
ಗಣಿ ಮಾಲೀಕರು ಈಗಾಗಲೇ ತೆಗೆದ ಗುಂಡಿಗೆ ಮಣ್ಣು ಮುಚ್ಚಲು ರಸ್ತೆ ಮಾಡಲು ಬಗೆದ ಗುಡ್ಡದ ಮಣ್ಣನ್ನು ತಂದು ಹಾಕಿಸಿಕೊಳ್ಳುತ್ತಿದ್ದರು. ಗಾಡಿಯೊಂದಕ್ಕೆ ನಾಲ್ಕು ಸಾವಿರದಿಂದ ಆರು ಸಾವಿರದವರೆಗೂ ಕಂಪನಿಗೆ ಕೊಡಬೇಕಿತ್ತು. ಇನ್ನು ಕೆಲವರು ತಮ್ಮ ಜಮೀನಿನಲ್ಲಿ ಕಂಪನಿ ಕಾಮಗಾರಿಗೆ ಕ್ರಷರ್ ಮಷೀನು ಇಡಲು ವಾಹನಗಳ ನಿಲ್ಲಿಸಲು ತಮ್ಮ ಜಮೀನನನ್ನು ತಿಂಗಳಿಗೆ ಇಂತಿಷ್ಟು ಎಂಬ ಒಪ್ಪಂದ ಮೇಲೆ ಕೊಟ್ಟಿದ್ದರು. ಒಟ್ಟಾರೆ ಕಂಚಿನಬೈಲು ಹಿಂದಿನ ನಿರುಮ್ಮಳ ವಾತಾವರಣವನ್ನು ಕಳೆದುಕೊಂಡಿತ್ತು. ಹೊಸ ಜನರಲ್ಲಿ ಸೂಟುಬೂಟು ತೊಟ್ಟು ಬರುವವರು ಕೆಲವರಾದರೆ, ಕೂಲಿ ಕೆಲಸಕ್ಕೆ ಬಂದವರು ಕೆಲವರು. 'ಈ ಜನ ಬಂದೀ ಎಲ್ಲ ಹಾಳ



ಮಾಡುಕೆ ಕೂತಿರು, ಹಗಲಿಗೂ ನಿದ್ದಿಲ್ಲ, ರಾತ್ರಿಗೂ ನಿದ್ರಿಲ್ಲ' ಎಂದು ಗೋಪಾಲಜ್ಜ ದಿನವೂ ಮರುಗುತ್ತಲೇ ಇದ್ದ. ಆದರೆ ಹೊಸ ಜನರ ಸಂಪರ್ಕ, ಹಣದ ಹರಿವು ಕಂಚಿನಬೈಲಿಗೆ ಹೊಸ ಹುರುಪನ್ನು ತಂದಿತ್ತು.

ಹೀಗಾಗಿ ಮೀರಾಗೇ ಆ ಹುಡುಗನ ನೋಡಿದಾಗ ಆತ ಆ ಕಡೆಯವನೇ ಇರಬೇಕು ಎನಿಸಿತ್ತು. ತಲೆಯೊಳಗೆ ಈ ವಿಚಾರವೇ ತುಂಬಿಕೊಂಡಿತ್ತು. 'ಏನಾರೂ ಎಡವಟ್ಟು ಮಾಡ್ಕಂಡ್ರಿ ಮಗು! ಪಾಪ ಬೀರಮ್ಮಕ್ಕ ಗಂಡು ದಿಕ್ಕಿಲ್ಲದವಳು. ಈ ಮಗೀಗಾಗಿ ಎಟ್ಟೆಲ್ಲಾ ತ್ರಾಸಪಟ್ಟದೋ, ಬೀರದ್ಯಾವ್ರಗೆ ಗುತ್ತು. ಲೈಕಾಗಲೀ ಮಗೀಗೇ, ಏನೂ ಅಂತದ್ದು ಆಗದೇ ಇರಲಿ' ಎಂದುಕೊಳ್ಳುತ್ತಾ ಮನೆ ಕಡೆ ನಡೆದಳು.

ಬೀರಮ್ಮಕ್ಕನಿಗೆ ಐವತ್ತೋ ಐವತ್ತೈದೋ ಇರಬೇಕು. ಒಂದುಕಾಲಕ್ಕೆ ನೋಡಲು ತುಂಬಾ ಸುಂದರಿಯಾಗಿದ್ದಳು. ಆದರೆ ಈಗ ಗದ್ದೆ, ಮನೆ ಕೆಲಸಗಳ ಜವಾಬ್ದಾರಿಯೆಲ್ಲ ಬಿದ್ದು ಮುಪ್ಪಿನ ನೆರಿಗೆಗಳು ಮುಖದಲ್ಲಿ ತುಂಬಿದ್ದವು. ಮೊದಲೆಲ್ಲಾ ನಕ್ಕರೆ ಗುಳಿ ಬೀಳುತ್ತಿದ್ದ ಕೆನ್ನೆಗಳು ಕವಳ ತಿಂದು ತಿಂದು ವಯಸ್ಸಿಗೆ ಮೊದಲೇ ಬಿದ್ದು ಹೋದ ದವಡೆ ಹಲ್ಲುಗಳ ಕಾರಣ ಇನ್ನಷ್ಟು ಒಳಹೋಗಿ ಕೆನ್ನೆಗಳು ಕುಳಿ ತೋಡಿಕೊಂಡಂತೆ ಕಾಣುತ್ತಿದ್ದವು. ಬೀರಮ್ಮಕ್ಕ ಪ್ರಾಯದಲ್ಲಿದ್ದಾಗ ಗೇಣಿ ಗದ್ದೆ ಮಾಡಲು ಬಂದ ಮಂಗಳೂರಿನ ಕಡೆಯ ಉಪ್ಪುನಾಡವನೊಬ್ಬನ ಸ್ನೇಹ ಮಾಡಿ ಮದುವೆಯಾಗಿದ್ದಳು. ಆತ ಎರಡು ಮಕ್ಕಳಾಗುತ್ತಲೇ ಇವಳನ್ನು ಬಿಟ್ಟು ಹೊರಟುಹೋಗಿದ್ದ. ಆ ಗಾಯದ ಬರೆ ಒಂದು ಕಡೆಯಾದರೆ ಜೊತೆಗೆ ಬಾಳಿ ಬದುಕಬೇಕಾದ ಗಂಡು ಮಗ ಕೈಗೆ ಬಂದ ಎನ್ನುವ ವಯಸ್ಸಲ್ಲಿ ಕಾಮಾಲೆ ಬಂದು ಸತ್ತು ಹೋಗಿದ್ದ. ಮಗಳು ಬೇಬಿನೇ ಈಗ ಆಕೆಗೆ ದಿಕ್ಕು. ಆಕೆ ನೋಡಲು ತಾಯಿಯಂತೆ ಸುಂದರಿ. ಶಾಂತ ಸ್ವಭಾವದವಳು. ಊರಲ್ಲಿ ಮೀರಾಳಂತೆ ಆಕೆಯನ್ನು ಎಲ್ಲರೂ ಪ್ರೀತಿಯಿಂದಲೇ ಕಾಣುತ್ತಿದ್ದರು.

ಮೀರಾ ಮನೆ ಕಡೆ ಬಂದರೂ ಕಿಟಕಿಯಿಂದ ಒಂದು ಕಣ್ಣು ಅತ್ತ ಹಾಯಿಸುತ್ತಲೇ ಇದ್ದಳು. ಮೀರಾ ಹೋದಳೆಂಬುದನ್ನು ಖಾತ್ರಿ ಮಾಡಿಕೊಂಡ ಆ ಗಂಡು ಮಳೆ ಜೋರಾಯ್ತೆಂಬ ನೆಪ ಹೂಡಿ ಮತ್ತೆ ಒಳ ಬಂದ. ನೀರಲ್ಲಿ ತೋಯ್ದಿದ್ದ. ನಡುಗುತ್ತಿದ್ದ. ಬೇಬಿ 'ಚಾ ತರಲೇ ಎಂದು ಕೇಳಿದಳು. 'ಹೂಂ..' ಎಂದ. ಅವಳು ಅಡುಗೆ ಕೋಣೆಗೆ ಹೋಗುವ ಮುನ್ನ ಅವಳನ್ನು ಸೆಳೆದುಕೊಂಡಿದ್ದ. ಬಿಸಿ ಚಹಾಗಿಂತಲೂ ಅವಳ ದೇಹವೇ ಹೆಚ್ಚು ಬೆಚ್ಚಗಾಗಿಸಿತ್ತು ಅವನನ್ನು. ಬೇಬಿ ಕೊಸರಿಕೊಂಡಳು, ತಪ್ಪೆಂದಳು, ಆದರೆ ಆತ ಚಾಲಾಕಿ. ಮಾತುಬಲ್ಲವ! ಅವನ ಪರಿಚಯ ಆಕೆಗಾದದ್ದೇ ಆಶ್ಚರ್ಯ. ಕಂಪನಿ ಕಂಚಿನಬೈಲಿನ ಚೀರೆಕಲ್ಲು ಗುಡ್ಡದಲ್ಲಿ ಕ್ರಷರ್ ಮಷೀನ್ ಹಾಕಿತ್ತು. ದಿನವೂ ಅಲ್ಲಿಗೆ ಬರುತ್ತಿದ್ದ ಆತ ಮೂರ್ನಾಲ್ಕು ವರ್ಷಗಳಿಂದ ಆ ಊರಿಗೆ ಪರಿಚಿತನಾಗಿದ್ದ. 'ಮೋಹಿತ್' ಎಂದು ತನ್ನನ್ನು ಪರಿಚಯಿಸಿಕೊಂಡಿದ್ದ. ಹೆಸರಿಗೆ ತಕ್ಕಂತಿದ್ದ. ಅದೊಂದು ದಿನ ಬೇಬಿ ಅಂಗಡಿಬೈಲಲ್ಲಿ ಬಸ್ಸಿಳಿದು ಮನೆಗೆ ಬರುವಾಗ ಬಿರುಬಿಸಿಲು. ಬೈಕ್ ಮೇಲೆ ಬಂದ